ಅದನ್ನು ಕೇಳಿಸಿಕೊಳ್ಳುವಾಗ ಒಳಗೇ ಒಂದು ನಡುಕ. ಹೊರಗೆ ತೋರಗೊಡುವುದಿಲ್ಲ. ನನ್ನ ದೇವರೇ... ಅಪ್ಪನ ಕೈಯಲ್ಲಿ ಧಾರಾಳ ಹಣವಿದೆಯೆಂದು ಜನರು ಹೇಳುವುದು. ಆ ನಡುವೆ ತಂತಿ ಸಂದೇಶ ಬಂತು. ಅಪ್ಪ ಊರಿಗೆ ಹೊರಡುತ್ತಿದ್ದಾರೆಂದು!

ಎಲ್ಲೆಲ್ಲಿಯೋ ಯುದ್ಧ ನಡೆಯುವ ಕಾಲ. ಅಪ್ಪ ಕೆಲಸ ಮಾಡುವ ಸ್ಥಳದಲ್ಲಿ ಯುದ್ಧ ಆರಂಭವಾಗಿದೆಯಂತೆ. ಅದುವೇ ಅಪ್ಪ ತಕ್ಷಣ ಊರಿಗೆ ಹೊರಡಲು ಕಾರಣ. ಪತ್ರ ಓದುವ ದೊಡ್ಡಣ್ಣನಿಗೆ ಯುದ್ಧಕ್ಕೆ ಸಂಬಂಧಿಸಿದ್ದೆಲ್ಲ ತಿಳಿದಿದೆ.ಮನೆಯ ವಾತಾವರಣದಲ್ಲಿ ಅದು ಸಂಚಲನವನ್ನು ಸೃಷ್ಟಿಸಿತು. ಅಪ್ಪ ಬರುತ್ತಿದ್ದಾರೆ! ಆರು ವರ್ಷಗಳ ಬಳಿಕ ನಾನು ಅಪ್ಪನನ್ನು ಕಾಣಬಹುದು! 'ಕೊಳಂಬೋದಿಂದ ಇಲ್ಲಿ ತಲುಪಲು ಎಷ್ಟು ದಿನ ಬೇಕು!' ನಾನು ವಿಚಾರಿಸಿದೆ. ಮೂರು ಗಂಟೆ ಹಡಗಿನಲ್ಲಿ ಕುಳಿತುಕೊಳ್ಳಬೇಕು. ಎರಡು ದಿವಸ ರೈಲು ಗಾಡಿಯಲ್ಲಿ. ಹಡಗು ನೀರಿನಲ್ಲಿ ಚಲಿಸುವ ವಾಹನವೆಂದು ಐದನೇ ತರಗತಿಯ ಪಾಠದಲ್ಲಿದೆ. ನೀರಿನಲ್ಲಿ ಚಲಿಸುವ ವಾಹನಗಳೆಂದರೆ ನನಗೆ ಹೆದರಿಕೆ. ಭಗವತೀ ದೇವಸ್ಥಾನಕ್ಕೆ ಕೈಮುಗಿಯಲು ಹೋಗುವಾಗ ಹೆದರಿ ನಡುಗುತ್ತಲೇ ದೋಣಿಯಲ್ಲಿ ಕುಳಿತುಕೊಳ್ಳುವುದಿದೆ. ದೋಣಿ ಹೋಗುವಾಗ ಮಗುಚಬಹುದೋ ಎಂಬ ಭಯ ನನಗೆ. ದೋಣಿ ಹೊಳೆಯಲ್ಲಿ. ಹಡಗು ಕಡಲಿನಲ್ಲಿ. ಕಡಲಿನಲ್ಲಿ ಗುಂಪಾಗಿ ಅಲೆಗಳಿರುತ್ತವೆ. ಹಡಗು ಮಗುಚುವುದಿದೆಯೋ?

ಅಪ್ಪ ಬೇಗನೇ ಬರಬೇಕು!

ಅಮ್ಮನ ಎಣಿಕೆಯಂತೆ ಸೋಮವಾರ ಅಪ್ಪ ಬಂದು ತಲುಪಬಹುದು ಎಂಬ ವಿಶ್ವಾಸ. ಶಾಲೆಯಿದ್ದರೂ ಹೋಗುವುದಿಲ್ಲವೆಂದು ನಿರ್ಧರಿಸಿದ್ದಾಯಿತು. ಅಣ್ಣಂದಿರೂ ಹೋಗಲಿಲ್ಲ. ಎಲ್ಲರಿಗೂ ಅಮ್ಮ ಲೀವ್ ಸ್ಯಾಂಕ್ಷನ್ ಮಾಡಿದ್ದರು.

ನಿದ್ದೆ ಬರುವವರೆಗೂ ಮೆಟ್ಟಿಲುಗಳೆಡೆಗೆ ನೋಡುತ್ತ ಕುಳಿತೆವು, ಬರಲಿಲ್ಲ. ಮರುದಿನ ಬೆಳಿಗ್ಗೆ ಅಪ್ಪ ಬಂದರು.ಪಣತ ಮನೆಯ ಮಹಡಿಯಿಂದ ಬಾಲಣ್ಣ ಅದನ್ನು ಮೊದಲು ಕಂಡದ್ದು. ಬಯಲುದಾರಿಯ ಮೂಲಕ ಅಪ್ಪ ಬರುತ್ತಿದ್ದಾರೆ. ಹಿಂದಿನಿಂದ ದೊಡ್ಡ ಪೆಟ್ಟಿಗೆಗಳನ್ನು ಹೊತ್ತುಕೊಂಡು ಮೂವರು ಕೂಲಿಯಾಳುಗಳೂ. ಜಗಲಿಗೆ ಬಂದ ಕೂಡಲೇ ಅಪ್ಪ ನನ್ನನ್ನು ಬಾಚಿ ಎತ್ತಿಕೊಂಡರು. ಒಂದು ವಿಷಯ ಸ್ಪಷ್ಟ. ಅಣ್ಣಂದಿರ ಮುಂದೆ ಯಾವಾಗಲಾದರೂ ನಾನು ಎತ್ತರದಲ್ಲಿದ್ದೇನೆ ಎಂದು ಅನ್ನಿಸಿದ್ದರೆ ಅದು ಆಗ ಮಾತ್ರ. ನಂತರ ಅವರ ಸರದಿ. ಅಪ್ಪ ಒಬ್ಬೊಬ್ಬರ ಮೈ ತಡವಿದರು. ಟ್ರೌಸರನ್ನು ಮೇಲಕ್ಕೆ ಸರಿಸಿಕೊಂಡು ಸ್ವಲ್ಪ ನಾಚಿಕೆಯಿಂದ ನಿಂತಿರುವ ನಾನು ಅಪ್ಪನನ್ನು ಚೆನ್ನಾಗಿ ನೋಡಿದೆ.

ಪಟದಲ್ಲಿ ಇರುವುದಕ್ಕಿಂತಲೂ ಹೆಚ್ಚು ಕಪ್ಪಗಿದ್ದಾರೆ. ದೇಹವೂ ದಪ್ಪಗಿದೆ. ಸೊಂಟಕ್ಕೆ ಚಿತ್ರಗಳಿರುವ ಪಟ್ಟಿಯನ್ನು ಕಟ್ಟಿದ್ದಾರೆ. ಅದರ ನಡುವೆ ನಾನು ಮತ್ತೊಂದು ಅದ್ಭುತವನ್ನು ಕಂಡದ್ದು. ಅಪ್ಪನ ಹಿಂಭಾಗದಲ್ಲಿ ಒಬ್ಬಳು ಹುಡುಗಿ!

ಬಿಳಿಚಿದ ಬಣ್ಣದ ತೆರೆದ ಕಣ್ಣುಗಳು. ಕೊರಳಿನವರೆಗೆ ಬೆಳೆಸಿದ ಗುಂಗುರು ಕೆಂಚು ಕೂದಲಿನ ಒಬ್ಬಳು ಹುಡುಗಿ. ದೊಡ್ಡ ಹೂಗಳಿರುವ ಬೆಳ್ಳಗಿನ ರೇಷ್ಮೆಯ ಗೌನು ತೊಟ್ಟಿದ್ದಾಳೆ. ನನಗಿಂತಲೂ ಎತ್ತರವಿದ್ದಾಳೆ. ಅಪ್ಪ ಅವಳಲ್ಲಿ ಏನೋ ಹೇಳಿದರು. ನನಗೆ ಆ ಭಾಷೆ ಅಪರಿಚಿತವಾಗಿತ್ತು. ಅವಳು ತಲೆಯಾಡಿಸಿದಳು. ಮತ್ತೆ ಚಾವಡಿಗೆ ಹೋಗಿ ಸಂಭ್ರಮಿಸಿ ನಿಂತಳು.

ಬಾಗಿಲು ಕಿಟಕಿಗಳಲ್ಲಿ ಕುತೂಹಲದ ಕಣ್ಣುಗಳನ್ನು ಕಾಣಬಹುದಿತ್ತು.

ಆರು ವರ್ಷಗಳ ಬಳಿಕ ಊರಿಗೆ ಬರುವ ಅಪ್ಪನಿಗಿಂತಲೂ ಎಲ್ಲರ ಗಮನ ಸೆಳೆದವಳು ಆ ಹುಡುಗಿ. ಕೂಲಿಯಾಳುಗಳು ಪೆಟ್ಟಿಗೆ ಸಾಮಾನುಗಳನ್ನು ಕೆಳಗಿಳಿಸಿದರು. ಬೃಹತ್‌ಗಾತ್ರದ ಪೆಟ್ಟಿಗೆಗಳು. ಜೊತೆಗೆ ಎಳೆ ನೀಲವರ್ಣದ ಬಟ್ಟೆಯ ಕವಚವಿರುವ ಬೆತ್ತದ ಪೆಟ್ಟಿಗೆಯೂ. ಅದನ್ನು ಕೆಳಗಿಟ್ಟಾಗ ಆ ಹುಡುಗಿ ಅದನ್ನು ಒಂದು ಬದಿಗೆ ಸರಿಸಿಟ್ಟಳು. ಚಾವಡಿಗೆ ಚಹಾ ಬಂತು. ಒಳಗಿನಿಂದ ಪಿಸುಗುಡುತ್ತ ಅಜ್ಜಿಯೂ ಚಾವಡಿಗೆ ಬಂದರು. 'ಬೆಳಗ್ಗಿನ ಗಾಡಿಗೇ ಬಂದೆಯಾ?', 'ಹೌದು, ಎಂತಹ ಜನಸಂದಣಿ. ಸೆಕೆಂಡ್ ಕ್ಲಾಸಿನಲ್ಲಿ ಕುಳಿತುಕೊಳ್ಳುವುದಕ್ಕೂ ಸ್ಥಳವಿಲ್ಲವೆಂದರೆ?' ಕಣ್ಣುಜ್ಜಿಕೊಂಡು ಅಪ್ಪ ಹೇಳಿದರು. 'ಕಷ್ಟಕಾಲ! ಹಿಂದೆಲ್ಲ ಜನರು ಕಾಶಿಗಾದರೂ ನಡೆದೇ ಹೋಗುತ್ತಿದ್ದರು.' 'ಎಲ್ಲರೂ ಸಿಲೋನ್‌ನಿಂದ ಬರುವವರು... ಅಲ್ಲಿ ಬಾಂಬು